## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **610 (739)**
ಸದಸ್ಯರ ಹೆಸರು : ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ)
ಉತ್ತರಿಸುವ ದಿನಾಂಕ : 11.12.2023
ಉತ್ತರಿಸುವ ಸಚಿವರು : ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಸರ್ಕಾರಿ ಪ್ರೌಢಶಾಲೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಸಹ ಶಿಕ್ಷಕರುಗಳ ಸಂಖ್ಯೆ ಎಷ್ಟು; ಮತ್ತು ಈ ಪ್ರೌಢಶಾಲೆ ಸಹ ಶಿಕ್ಷಕರುಗಳಿಗೆ ಮುಖ್ಯ ಶಿಕ್ಷಕರಾಗಿ ಬಡ್ತಿ ನೀಡುವುದು ಹಾಗೂ ಹಿರಿಯ ಶಿಕ್ಷಕರುಗಳಿಗೆ ಉಪನ್ಯಾಸಕರಾಗಿ ಬಡ್ತಿ ಹೊಂದಲು ಅರ್ಹರಿರುವ ಶಿಕ್ಷಕರುಗಳ ಸಂಖ್ಯೆ ಎಷ್ಟು: | ರಾಜ್ಯದ ಸರ್ಕಾರಿ ಪ್ರೌಢಶಾಲೆಗಳಲ್ಲಿ ಪ್ರಸ್ತುತ ಸೇವೆ ಸಲ್ಲಿಸುತ್ತಿರುವ ಸಹ ಶಿಕ್ಷಕರುಗಳ ಸಂಖ್ಯೆ = 34186.<br><br>ಪ್ರೌಢಶಾಲೆ ಸಹಶಿಕ್ಷಕರುಗಳಿಗೆ ಮುಖ್ಯ ಶಿಕ್ಷಕರಾಗಿ ಬಡ್ತಿ ಹೊಂದಲು 831 ಮುಖ್ಯ ಶಿಕ್ಷಕರ ಹುದ್ದೆಗಳು ಖಾಲಿ ಇದ್ದು, ಈ ಹುದ್ದೆಗಳಿಗೆ ಮುಂಬಡ್ತಿಯನ್ನು ನೀಡಲು ಕ್ರಮವಹಿಸಲಾಗುತ್ತಿದೆ.<br><br>ಪ್ರೌಢಶಾಲೆ ಸಹಶಿಕ್ಷಕರುಗಳಿಗೆ ಉಪನ್ಯಾಸಕರಾಗಿ ಬಡ್ತಿ ಹೊಂದಲು ಅರ್ಹ ಪ್ರೌಢಶಾಲಾ ಸಹ ಶಿಕ್ಷಕರ ನಾಲ್ಕು ವಿಭಾಗಗಳು ಸೇರಿದಂತೆ ಅಂತಿಮ ಜೇಷ್ಠತಾಪಟ್ಟಿಯನ್ನು ಪ್ರಕಟಿಸಿದ ನಂತರ ಅರ್ಹತೆ ಹೊಂದಿರುವ ಹಿರಿಯ ಶಿಕ್ಷಕರುಗಳ ಸಂಖ್ಯೆ ಲಭ್ಯವಾಗುತ್ತದೆ. |
| ಆ) | ರಾಜ್ಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪ್ರೌಢಶಾಲೆ ಸಹ ಶಿಕ್ಷಕರುಗಳಿಗೆ ಮತ್ತು ಹಿರಿಯ ಶಿಕ್ಷಕರುಗಳಿಗೆ ಮುಂಬಡ್ತಿಯನ್ನು ಯಾವ ಕಾಲಮಿತಿಯೊಳಗೆ ನೀಡಲಾಗುವುದು? | ಅರ್ಹ ಪ್ರೌಢಶಾಲೆ ಸಹ ಶಿಕ್ಷಕರುಗಳಿಗೆ ಮುಖ್ಯ ಶಿಕ್ಷಕರಾಗಿ ಮೂರು ಆಯುಕ್ತಾಲಯದ ಹಂತದಲ್ಲಿ ಬಡ್ತಿಯನ್ನು ನೀಡಲಾಗುತ್ತಿದೆ.<br><br>ಶಾಲಾ ಶಿಕ್ಷಣ ಇಲಾಖೆಯ ನಾಲ್ಕು ವಿಭಾಗಗಳಲ್ಲಿನ ಸ್ನಾತಕೋತ್ತರ ಪದವಿ ಪಡೆದಿರುವ ಅರ್ಹ ಪ್ರೌಢಶಾಲಾ ಸಹ ಶಿಕ್ಷಕರ ನಾಲ್ಕು ವಿಭಾಗಗಳು ಸೇರಿದಂತೆ ಅಂತಿಮ ಜೇಷ್ಠತಾಪಟ್ಟಿಯನ್ನು ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ಇವರು ಶೀಘ್ರದಲ್ಲಿಯೇ ಪ್ರಕಟಿಸಲಿದ್ದು, ಅಂತಿಮ ಜೇಷ್ಠತಾ ಪಟ್ಟಿ ಪ್ರಕಟಗೊಂಡ ನಂತರ ಅರ್ಹರಿಗೆ ಉಪನ್ಯಾಸಕರಾಗಿ ಮುಂಬಡ್ತಿ ನೀಡಲು ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು. |

ಇಪಿ 162 ಎಸ್‌ಓಹೆಚ್ 2023

**(ಎಸ್. ಮಧು ಬಂಗಾರಪ್ಪ)**
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು